# ನವಿಲುಗನ್ನಡಿ

ಈ ಸಂಚಿಕೆಯ ಮುಖಪುಟ ಪ್ರಕೃತಿಯಂತೆ ಚೇತೋಹಾರಿಯಾಗಿದೆ.

**ಅಶೋಕ ಮಲ್ಲಪ್ಪ ಸುರಪೂರ, ಬೆಳಗಾವಿ**

ವಸ್ತು ವೈವಿಧ್ಯದಿಂದ ಕೂಡಿದ ಕತೆಗಳು ಹಾಗೂ ಲೇಖನಗಳಿಂದ ಅಕ್ಟೋಬರ್ ಸಂಚಿಕೆ ಸಮೃದ್ಧವಾಗಿ ಮೂಡಿ ಬಂದಿದೆ.

**ಎನ್. ಮಹಾದೇವ, ಚೆನ್ನೈ**

ಗ್ರಾಮೀಣ ಕಥಾಹಂದರವುಳ್ಳ ಮನೋಜ್ಞ ನಿರೂಪಣೆಯ 'ಕತ್ತಲಿನಾಚೆ' (ಟಿ.ಎಸ್. ಗೊರವರ) ಕತೆ ಮನಸೆಳೆಯಿತು.

**ಮುರಲಿ ಕುಂಬ್ಳೆ, ಬೆಂಗಳೂರು**

ಮಾನವನ ಅತಿ ಆಸೆಯ ಪರಿಣಾಮ ಮತ್ತು ಅದರ ಮುಕ್ತಾಯವನ್ನು ಮಾರ್ಮಿಕವಾಗಿ ತೆರೆದಿಟ್ಟ 'ಕೀಟ' (ಕೇಶವರೆಡ್ಡಿ ಹಂದ್ರಾಳ) ಕತೆ ವಾಸ್ತವದ ನಿರೂಪಣೆಯಾಗಿದೆ.

**ನೀಲಮ್ಮ ಕುಮಾರಪ್ಪ, ಲಿಂಗಸೂರು**

ಹೋರಾಟಗಾರನ ಬದುಕು, ಬವಣೆ ಬಿಂಬಿಸುವ 'ಯಾಗದ ಕುದುರೆ' (ಅಮರೇಂದ್ರ ಹೊಲ್ಲಂಬಳ್ಳಿ) ಕತೆ ಉತ್ತಮವಾಗಿ ಮೂಡಿ ಬಂದಿದೆ.


**ಪಿ. ಜಯವಂತ ಪೈ, ಕುಂದಾಪುರ**

'ಸರಸವಾಣಿಯ ಗಿಳಿಗಳು' (ಮೂಲ: ಎಸ್.ಎಂ.ಎ. ರಾಮ್. ಕನ್ನಡಕ್ಕೆ: ಕೆ. ನಲ್ಲತಂಬಿ) ಕತೆಯ ಆಳ, ಅಗಲ ದೊಡ್ಡದು. ಅನುವಾದ ಉತ್ತಮವಾಗಿದೆ.

**ಎನ್. ಮೋಹನ್, ತುಮಕೂರು**

'ನವಿಲುಗರಿ'ಯಲ್ಲಿ ಮೂಡಿ ಬಂದ 'ಹುಡುಕಾಟ' (ಯಶವಂತ ಚಿತ್ತಾಲ) ಕತೆ ಸರಾಗವಾಗಿ ಓದಿಸಿಕೊಂಡಿತು.

**ಅನುಪಮಾ ಶಿವಕುಮಾರ್, ಮೈಸೂರು**




'ಜನಪದ ಚರಿತ್ರೆಯ ನಿರೂಪಕ: ಕೃಷ್ಣಮೂರ್ತಿ ಹನೂರು' (ಸಂ: ಜಿ.ಕೆ. ರವೀಂದ್ರಕುಮಾರ್) ಸಂದರ್ಶನ ಹನೂರು ಅವರ ಪ್ರತಿಭೆಯ ವಿವಿಧ ಆಯಾಮಗಳನ್ನು ಪರಿಚಯಿಸಿತು.

**ಶಂಕರ್ ಎನ್., ಮೈಸೂರು**

'ನನ್ನ ಕಥಾಪ್ರಸಂಗ' ಮಾಲಿಕೆಯಲ್ಲಿ ಕತೆಗಾರ ಬಿ.ಎಲ್. ವೇಣು ಅವರ ಅನುಭವದ ನುಡಿಗಳು ಮಾರ್ಮಿಕವಾಗಿವೆ.

**ಚಿದಾನಂದ ಕಳಸಮ್ಮ ರೂಳೆನವರ್, ಕಲಬುರ್ಗಿ**

'ಪ್ರಯೋಗಶೀಲ ನಾಟಕಕಾರ ಎ.ಎನ್. ಶೇಷಾಚಾರ್'(ಎನ್. ಜಗನ್ನಾಥ ಪ್ರಕಾಶ್) ಲೇಖನ ಉತ್ತಮವಾಗಿದೆ. ಪುಟ್ಟಸ್ವಾಮಯ್ಯ, ರಾಜಕುಮಾರ್, ಬಾಲಕೃಷ್ಣ, ವರದರಾಜ, ನರಸಿಂಹರಾಜು ಅವರಂತಹ ದೈತ್ಯ ಪ್ರತಿಭೆಗಳಿಗೆ ಈ ಕಂಪನಿ ವೇದಿಕೆ ಒದಗಿಸಿದ್ದು ಮಹತ್ವದ ಸಂಗತಿ.

**ಬಾ.ರಂ. ಸುರೇಶ, ಶಿವಮೊಗ್ಗ**

'ವಾಗ್ದೇವಿ' (ಪಿ.ಪಿ. ಉಪಾಧ್ಯ) ಕತೆ ಚೆನ್ನಾಗಿದೆ. ಇಂತಹ ಬೇಜವಾಬ್ದಾರಿ ಗಂಡ, ತಂದೆಯರು ಎಲ್ಲಾ ಕಡೆಯೂ ಇದ್ದಾರೆ. ಲೆಕ್ಕಕ್ಕುಂಟು ಆಟಕ್ಕಿಲ್ಲದ ಹಾಗೆ.

**ಕೆ. ಬಾಲಚಂದ್ರ, ಕಲಬುರ್ಗಿ**